# ಶಾಸ್ತ್ರಿಯವರನ್ನು ನೆನೆಯುತ್ತಾ...

**ತುಮಕೂರಿನಿಂದ ದೆಹಲಿಗೆ ಪ್ರವಾಸ ಹೋಗಿದ್ದ ನಮಗೆ ಅಂದಿನ ಪ್ರಧಾನಮಂತ್ರಿ ಲಾಲಬಹಾದ್ದೂರ್ ಶಾಸ್ತ್ರಿ ಅವರನ್ನು ಭೇಟಿಯಾಗುವ ಸುಯೋಗ ಒದಗಿಬಂದಿತ್ತು. ಅವರೊಂದಿಗೆ ಮಾತನಾಡಿದ್ದು, ಫೋಟೊ ಕ್ಲಿಕ್ಕಿಸಿಕೊಂಡದ್ದು ಎಲ್ಲ ನೆನಪುಗಳು ಮಧುರವಾದದ್ದೇ. 54 ವರ್ಷಗಳ ಹಿಂದೆ ದೊರೆತ ಈ ಸೌಭಾಗ್ಯ ಎಂದಿಗೂ ಮರೆಯುವಂಥದ್ದಲ್ಲ.**

**■ ಜಿ. ರಾಜನ್, ತುಮಕೂರು**



ಶಾಸ್ತ್ರೀಜಿಯವರ ಬಲಗಡೆ ಎರಡನೆಯವರು ಜಿ.ರಾಜನ್

ಜೀವನದ ಪಯಣದಲ್ಲಿ ಕೆಲವು ಘಟನೆಗಳು ಮರೆಯಲಾಗದ ಸವಿ ಸವಿ ನೆನಪುಗಳಾಗಿ ಉಳಿಯುತ್ತವೆ. ಅಂತಹದರಲ್ಲಿ ಅತಿ ಮುಖ್ಯವಾದದ್ದು 1964ರ ಮೇ 12ರಲ್ಲಿ ಭಾರತದ ಪ್ರಧಾನಮಂತ್ರಿಗಳಾದ ಲಾಲಬಹದ್ದೂರ್ ಶಾಸ್ತ್ರೀಜಿಯವರನ್ನು ನೋಡಿದ್ದು. ಅವರೊಂದಿಗೆ ಕೆಲ ಕಾಲ ಕಳೆದದ್ದು.

1964 ಡಿಸೆಂಬರ್‌ನಲ್ಲಿ ತುಮಕೂರಿನ ಪಾಲಿಟೆಕ್ನಿಕ್ ಎಲೆಕ್ಟ್ರಿಕಲ್ ವಿಭಾಗದಿಂದ ಉತ್ತರ ಭಾರತದ ಕೈಗಾರಿಕಾ ಪ್ರವಾಸ ಕೈಗೊಂಡಿದ್ದೆವು. ಈ ಪ್ರಯುಕ್ತ ದೆಹಲಿಗೆ ಹೋದಾಗ ಅಲ್ಲಿ ನಾವು ಇದ್ದದ್ದು ಆಗ ಸಂಸದರಾಗಿದ್ದ ಸಿ.ಆರ್. ಬಸಪ್ಪನವರ ಮನೆಯಲ್ಲಿ. ಅವರೇ ನಮ್ಮನ್ನು ಪ್ರಧಾನಮಂತ್ರಿ ಲಾಲಬಹದ್ದೂರ್ ಶಾಸ್ತ್ರೀಜಿಯವರನ್ನು ಭೇಟಿ ಮಾಡಿಸಲು ಕರೆದುಕೊಂಡು ಹೋಗಿದ್ದರು.

ಅಂದು ಬೆಳಿಗ್ಗೆ 9 ಗಂಟೆಗೆ ಅವರನ್ನು ನೋಡಲು ಹೋದೆವು. ಶಾಸ್ತ್ರೀಜಿಯವರು ಸಂಸದರ ನಿವಾಸದಲ್ಲಿಯೇ ಇದ್ದರು. ಅಪ್ಪಟ ಗಾಂಧಿ ಅನುಯಾಯಿಗಳಾದ ಶಾಸ್ತ್ರೀಜಿಯವರು ನಗುಮೊಗದಿಂದ ಬಂದಾಗ ನಮಸ್ಕರಿಸಿದೆವು. ಸಂತಸವಾಯ್ತು. ಅವರು 'ನೀವು ಸರ್ ಎಂ. ವಿಶ್ವೇಶ್ವರಯ್ಯನವರ ರಾಜ್ಯದಿಂದ ಬಂದಿದ್ದೀರಿ. ಅವರ ನಡೆ ನುಡಿಯಂತೆ ನಡೆದು ದೇಶ ಸೇವೆ ಮಾಡಬೇಕೆಂದು ತಿಳಿಸಿದರು. ಎಲ್ಲರಿಗೂ ಟೀ ಕೊಡಿಸಿದರು. ಎಲ್ಲರೊಂದಿಗೆ ಫೋಟೊ ತೆಗೆಸಿಕೊಂಡರು. ಆಗಲೇ ಅವರ ಧ್ಯೇಯವಾಕ್ಯ 'ಜೈ ಜವಾನ್', ಜೈ ಕಿಸಾನ್' ಹೇಳಿದ್ದರು. ದೇಶಕ್ಕಾಗಿ ಸ್ವಾವಲಂಬನೆಗಾಗಿ ದೇಶದ ಎಲ್ಲರೂ 'ಸೋಮವಾರ ರಾತ್ರಿ ಆಹಾರ ಬಿಡಿ' ಎಂದು ತಿಳಿಸಿದರು.

54 ವರ್ಷಗಳ ಹಿಂದಿನ ಘಟನೆ ನೆನೆದಾಗ ಅಚ್ಚರಿ. ಇಂದು ಪ್ರಧಾನಮಂತ್ರಿಗಳು ಸಾಮಾನ್ಯರು ಅವರ ನಿವಾಸದಲ್ಲಿ ನೋಡುವುದು ಸಾಧ್ಯವೇ ಅನಿಸುತ್ತದೆ. ಭಾರತದ ಎರಡನೆಯ ಪ್ರಧಾನಮಂತ್ರಿಗಳಾಗಿ ಸರಳ, ನೇರ, ಧೈರ್ಯದಿಂದ ಭಾರತವನ್ನು ಬೆಳಗಿದವರು. ಇದಂತೂ ನನ್ನ ಜೀವನದ ಸದಾ ಹಚ್ಚಹಸಿರಾಗಿದೆ. ■